ಎಲ್ಲರೂ ಸರಿಯಿದ್ದಾರೆ ಎಂದು ಹೇಳಲು ಆಗುವುದಿಲ್ಲ. ಗಂಡ ಹೆಂಡತಿಗೆ ಹೊಂದಾಣಿಕೆ ಇದ್ದರೆ ಸಾಕು. ಅವನಿಗೆ ಇದು ಒಂದೇ ಕಸುಬಾ ಎಂದರೆ ಅದು ಒಂದೇ ಅಲ್ಲ. ಬೇಕಿದ್ದರೆ ಶ್ರಾದ್ಧಕ್ಕೆ ಹೋಗುತ್ತಾನೆ. ಸತ್ಯನಾರಾಯಣ ಪೂಜೆಯಲ್ಲಿ ಸತ್ಯನಾರಾಯಣನ ಕತೆ ಓದುತ್ತಾನೆ. ಮಧ್ಯೆ ಮಧ್ಯೆ ಎರಡು ಚಿಟಿಕೆ ನಶ್ಯವನ್ನು ಮೂಗಿಗೆ ಏರಿಸುತ್ತಾನೆ. ಅದರ ಮಧ್ಯೆ ಆಕ್ಷೀ ಎಂದು ಸೀನಿದರೂ ಸೀನಿದ. ಆದರೆ, ಅವನು ಒಂದು ಮಾತನ್ನು ಮಾತ್ರ ಬಿಡುವುದಿಲ್ಲ. "ನಶ್ಯ ಎಂದರೆ ಶ್ರೀಕೃಷ್ಣ ನಶ್ಯ. ಅದರ ಹಾಗೆ ಬೇರೆ ಯಾವುದೂ ಇಲ್ಲ. ತೀರ್ಥಹಳ್ಳಿಯ ಇಸ್ಮಾಲಿಯ ಅಂಗಡಿಯಲ್ಲಿ ಮಾತ್ರವೇ ಸಿಕ್ಕುವುದು" ಹೀಗೆ ಹೇಳಿ ಮೂಗನ್ನು ಒರೆಸುತ್ತಾನೆ. ಗರುಡ ಪುರಾಣವನ್ನು, ಭಾಗವತವನ್ನು, ಕುಮಾರವ್ಯಾಸನನ್ನು ಬೇಕಿದ್ದರೆ ಗಂಟೆಗಟ್ಟಲೆ ವಿವರಿಸಬಲ್ಲ. ಆಗ ಆ ಕ್ಷಣದಲ್ಲಿ ನೆನಪಿಗೆ ಬಂದವನು ಅವನು. ಈಗ ಅವನನ್ನು ಬೈದು ಪ್ರಯೋಜನವಿಲ್ಲ. ಏನೋ ಅನಿಸಿತು. ಅದನ್ನೇ ಲಲಿತೆಗೆ ಹೇಳಿದ. ''ತನ್ನದು ತಪ್ಪಾಯಿತು ಲಲಿತ'' ಎಂದ ನಾರಣಪ್ಪ ಗೋಡೆಗೆ ಒರಗಿ ನಿಂತುಕೊಂಡ. ಅವಳಿಗೆ ಮತ್ತೆ ಸಿಟ್ಟು ಹೆಚ್ಚಾಯಿತು. ಮತ್ತೆ ಕೂಗಾಡಿದಳು. ನಾರಣಪ್ಪ ಸ್ವಲ್ಪ ಮುಂದೆ ಹೋಗಿ ಅವಳ ಕಣ್ಣೀರನ್ನು ಒರೆಸಲು ಯತ್ನವನ್ನು ಮಾಡಿದ. ತಟಕ್ಕನೆ ಅವಳು ಅವನ ಮುಖಕ್ಕೆ, "ಥೂ, ಹಂದಿ ನೀವು" ಎಂದು ಉಗುಳಿದಳು. ಆಗ ಮಾತ್ರ ಅವನು ಅವಾಕ್ಕಾದ. ನಾರಣಪ್ಪನ ತಲೆಯಲ್ಲಿ ನೂರಾರು ಇರುವೆಗಳು. ತಲೆಯ ಹಿಂಬದಿಯಲ್ಲಿ ಯಾರೋ ಹೊಡೆದ ಅನುಭವ. ಹಣೆಯ ಎಡಭಾಗದ ನರವು ಉಬ್ಬಿದ ಅನುಭವವಾಯಿತು. ಯಾವುದನ್ನು ತನ್ನ ಜೀವಮಾನದಲ್ಲಿ ಕೇಳಿಲ್ಲವೋ ಅಂಥಾ ಮಾತುಗಳನ್ನು ಅವನು ಆಗ ಕೇಳಿಸಿಕೊಂಡ. ಅವಳ ಉಗುಳನ್ನು ತನ್ನ ಬೈರಾಸಿನಿಂದ ಒರಸಿ ನಿಧಾನವಾಗಿ ಹೇಳಿದ: "ಲಲಿತ ಒಳ್ಳೆಯ ಕೆಲಸವನ್ನು ಮಾಡಿದೆ.'' ಅಲ್ಲಿಂದ ಹೊರಟ. ಮತ್ತೆ ಎಂದೂ ಅವನು ಅವಳ ಕೊಠಡಿಗೆ ಹೋಗಲಿಲ್ಲ. ಮಾತೂ ಆಡಲಿಲ್ಲ. ಅದು ಸತ್ಯ. ಆದರೆ, ಅದನ್ನು ಯಾರಿಗೂ ಹೇಳುವಂತೆ ಇಲ್ಲ. ನಾರಣಪ್ಪ ಅಂದಿನಿಂದ ಮನೆಯಲ್ಲಿ ಹೆಚ್ಚು ಕಾಲ ಕಳೆಯುವುದನ್ನು ಬಿಟ್ಟ. ಹೋದರೆ ಮತ್ತೆ ಕೆಲವು ದಿನ ಬರುವುದನ್ನೂ ಬಿಟ್ಟ. ಇದೇ ಸಮಯದಲ್ಲಿ ಅವಳು ಓಡಿ ಹೋದಳು. ಇದು ನಡೆದ ಕೆಲವು ದಿನಗಳಾದ ಮೇಲೆ ಅವನಿಗೆ ತಿಳಿದ ಸತ್ಯವೆಂದರೆ, ಅವಳ ಪ್ರಿಯಕರ ನಾಗರಾಜ ಶಾಸ್ತ್ರಿ. ಊರಿನಲ್ಲಿ ಇದ್ದಾಗ ಅವನ ಜೊತೆಗೆ ಇದ್ದುದನ್ನು ನೋಡಿದ ಅವಳ ತಂದೆ ನಾರಣಪ್ಪನಿಗೆ ಗಂಟು ಹಾಕಿ ನಿರಾಳವಾದ. ಅವಳಿಗೆ ಅವನ ಗುಂಗು ಬಿಡಲಿಲ್ಲ. ಸಹಜವಾಗಿಯೇ ನಾರಣಪ್ಪನ ಬಗ್ಗೆ ವಾಕರಿಗೆ ಬಂದದ್ದೂ ಇದೇ ಕಾರಣದಿಂದ. ಆಗ ಅನಿಸಿತು: ಅವಳ ಬಗ್ಗೆ ತಾನು ಇನ್ನು ಹೆಚ್ಚು ಯೋಚನೆ ಮಾಡಬೇಕಾದ ಅಗತ್ಯ ಇರಲಿಲ್ಲ. ಒಂಟಿತನವನ್ನು ಹೋಗಲಾಡಿಸಲು ಯಕ್ಷಗಾನವನ್ನು ಅಭ್ಯಾಸ ಮಾಡಿದ. ಮೇಳದ ಜೊತೆಗೆ ಹೋದ. ಮನೆಯನ್ನು ನೋಡುವವರೂ ಇಲ್ಲ. ಬಂದರೆ ಕೆಲವು ದಿನ ಇಲ್ಲಿ. ಮತ್ತೆ ತಿರುಗಾಟ. ಕಾಡಿನ ನಡುವೆ ಇರುವ ತನ್ನ ಮನೆಯನ್ನು ಯಾರೂ ನೋಡಬೇಕಾದ ಅಗತ್ಯವೂ ಇರಲಿಲ್ಲ. ಒಬ್ಬಳು ಲಲಿತೆಯಿಂದ ತನ್ನ ಜೀವನವೂ ಹೋಯಿತು ಎಂದೂ ಭಾವಿಸಿಕೊಳ್ಳುತ್ತಾನೆ. ಮತ್ತೆ ಕೆಲವು ದಿನ ತನ್ನದು ತಪ್ಪು ಎಂದು ಭಾವಿಸುತ್ತಾನೆ. ಪಾಪಪ್ರಜ್ಞೆ ಮತ್ತು ಸಿಟ್ಟು ಎರಡೂ ತನ್ನನ್ನು ಹೀಗೆ ಮಾಡಿದೆ ಎಂದೂ ಅನಿಸುತ್ತದೆ. ಮನುಷ್ಯನಿಗೆ ಅವಮಾನ ಎನ್ನುವುದು ಬೆಂಕಿಯಂತೆ ಸುಡುತ್ತದೆ. ಅದು ತನ್ನ ಹೊಟ್ಟೆಯಲ್ಲಿ ಹಾಗೆಯೇ ಅಡಗಿ ಕುಳಿತಿದೆ. ಕರುಳನ್ನು ಅದು ಹಿಂಡಿದೆ. ನಿರಂತರವಾಗಿ ಜೀವನವನ್ನು ಕಾಡಿದೆ. ತನ್ನ ಹೆಂಡತಿ ಅವಮಾನ ಮಾಡಿದ್ದು ಅವನ ಮಟ್ಟಿಗೆ ಅತ್ಯಂತ ದೊಡ್ಡದು. ಅದು ಬೇಕಿತ್ತೇ ಎಂದು ಕೇಳಿದರೆ ಅದರ ಅಗತ್ಯ ಇರಲಿಲ್ಲ. ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ತನ್ನನ್ನು ಕಡಿಕಡಿದು ತುಂಡು ಮಾಡಿದೆ. ಒಂಟಿಯಾಗಿರುವುದು ಅಂದರೆ ಅದು ನೋವು. ಇಂತಹ ದಿನಗಳಲ್ಲಿಯೇ ಏಕಾಕಿತನವನ್ನು ಮೀರಲು ಅವನಿಗೆ ಕುಡಿತ ಬೇಕಾಯಿತು. ಕುಡಿದ. ಒಂದು ಜೋರು ಮಳೆಯಲ್ಲಿ ಒಂದು ದಿನ ಚಾವಡಿಯಲ್ಲಿ ಎಲೆ ಅಡಿಕೆಯನ್ನು ಬಾಯಲ್ಲಿ